MYSORE LEGISLATIVE ASSEMBLY

SEVENTH DAY.

Wednesday, 28th March 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA B.A., B.L.) in the Chair.

MYSORE APPROPRIATION (VOTE ON ACCOUNT) BILL, 1962.

Sri S. R. KANTHI.—Sir, I beg to introduce the Mysore Appropriation (Vote on Account) Bill, 1962.

Mr. SPEAKER.—The Mysore Appropriation (Vote on Account) Bill, 1962 is introduced.

Motion to consider.

Sri S. R. KANTHI.—Sir, I beg to move "that the Mysore Appropriation (Vote on Account) Bill, 1962 be taken into consideration."

Mr. SPEAKER.—Motion moved: "That the Mysore Appropriation (Vote on Account) Bill, 1962 be taken into consideration."

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಸಭೆಯ ಮುಂದೆ ಈಗ ತಾನೆ ಮಾನ್ಯ ಅರ್ಥ ಮಂತ್ರಿಗಳು ಪರಿಶೀಲನೆಗಾಗಿ ಮಂಡಿಸಿರತಕ್ಕ 1962ನೆಯ ಇನವಿಯ ಮೈಸೂರು ಅಪ್ರೋಪ್ರಿಯೇಷನ್ ಮಸೂದೆಯ ವೋಟ್ ಆನ್ ಅಕೌಂಟ್ ಸೂಚನೆಯ ಮೇಲೆ ಕೆಲವು ವಿಷಯಗಳನ್ನು ಹೇಳಬೇಕೆಂದು ನಾನು ಇಷ್ಟಪಡುತ್ತೇನೆ. ಮೊದಲನೆಯದಾಗಿ ಈ ಆಯವ್ಯಯದ ವಿಷಯದಲ್ಲಿ ಈ ಸಭೆ ತನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸುವುದಕ್ಕೆ ಸಾಕಾದಷ್ಟು ಅವಕಾಶವನ್ನು ಹೊಂದಿಲ್ಲ ವೆಂಬ ಬಗ್ಗೆ ನಮಗೆಲ್ಲ ತುಂಬಾ ವಿಷಾದವಾಗಿದೆ. ಮೂರನೆಯ ಮಹಾ ಚುನಾವಣೆಗಳು ಈ ವರ್ಷ ನಡೆದದ್ದರಿಂದ ಕ್ರಮವಾಗಿ ಮಾರ್ಚಿ ತಿಂಗಳಿನಲ್ಲಿ ನಡೆಯಬೇಕಾಗಿದ್ದ ಆಯವ್ಯಯ ಅಧಿವೇಶನ ನಡೆಯಲಾಗಲಿಲ್ಲ ಮತ್ತು ಹೊಸದಾಗಿ ಮಂತ್ರಿಮಂಡಳ ಈಗ ತಾನೆ ರಚನೆಯಾಗುತ್ತಿರುವುದರಿಂದ ನೂಕ್ತರೀತಿಯಲ್ಲಿ ಚರ್ಚೆಗೆ ಅವಕಾಶವಿಲ್ಲವೆಂಬುದನ್ನು ನಾನು ಚೆನ್ನಾಗಿ ಮನಗಂಡಿದ್ದೇನೆ. ಆದಾಗ್ಯೂ ನಮ್ಮ ಮೇಲೆ ಒಂದು ಗುರುತರವಾದ ಜವಾಬ್ದಾರಿಯಿದೆ. ಮಾಡತಕ್ಕ ಕೆಲಸಗಳನ್ನು ಆದಷ್ಟು ನಮರ್ಪಕವಾಗಿ, ತೃಪ್ತಿಕರವಾಗಿ ಮಾಡುವುದಕ್ಕೆ ಪ್ರಯತ್ನಗಳನ್ನಾದರೂ ಈ ಹೊತ್ತು ಮಾಡಬೇಕಾಗುತ್ತದೆ. ನಾನಾದರೋ ಕರ್ತವ್ಯ ದೃಷ್ಟಿಯಿಂದ ಸರ್ಕಾರಕ್ಕೆ ಈ ನಂದರ್ಭದಲ್ಲಿ ಕೆಲವು ಸ್ಪಷ್ಟವಾದ ಸೂಚನೆಗಳನ್ನು ಕೊಡ ಬಯಸುತ್ತೇನೆ.

ಇಂದು ಹಣಕಾಸಿನ ಪರಿಸ್ಥಿತಿ, ನಮ್ಮ ರಾಜ್ಯದ್ದು ಮಾತ್ರವೇ ಅಲ್ಲ, ಇಡೀ ಭರತಖಂಡದ್ದೇ ತುಂಬಾ ಗಂಡಾಂತರಕ್ಕೆ ಈಡಾಗಿದೆ. ಈ ವರ್ಷದ ಆಯವ್ಯಯದಲ್ಲಂತೂ ನಾಲ್ಕು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಕೊರತೆ ಬೀಳುವ ನಂಭವ ಕಾಣುತ್ತದೆ. ಹೀಗೆಯೇ ಪ್ರತಿವರ್ಷವೂ ಕೊರತೆ ಬೀಳುತ್ತಿದೆ. ಆದ್ದರಿಂದ ಇದು ಏನೋ ಆಕಸ್ಮಿಕವಾಗಿ ಬಿದ್ದಂಥಹ ಕೊರತೆಯಲ್ಲ. ಈ ಇಡೀ ರಾಷ್ಟ್ರ ಕಳೆದ ಹತ್ತುವರ್ಷಗಳಿಂದಲೂ ವರ್ಷವರ್ಷವೂ ಕೊರತೆಯನ್ನು ಎದುರಿಸುತ್ತಿದೆ. ಈ ಭರತಖಂಡದಲ್ಲಿ ಯಾವುದೇ ರಾಷ್ಟ್ರದ ಆಯವ್ಯಯವನ್ನು ನೋಡಿದರೂ, ಸರ್ಕಾರದ ಹಣಕಾಸಿನ ನೀತಿಯಲ್ಲಿ ಆದಾಯ ಮತ್ತು ವೆಚ್ಚ ಇವೆರಡರ ಮಧ್ಯೆ ಇರತಕ್ಕ ಅಂತರ ವರ್ಷವರ್ಷವೂ ಬೆಳೆಯುತ್ತಲೇ ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸಾಮಾನ್ಯವಾಗಿ ಒಂದು ರಾಜ್ಯ ಇಂಥ ಕೊರತೆಗಳನ್ನು ತುಂಬಿಸಿಕೊಳ್ಳುವುದಕ್ಕೆ ಹೊಸಹೊಸ ತೆರಿಗೆಗಳನ್ನು ಹಾಕುತ್ತದೆ; ಆ ರೀತಿ ಹೊಸ ತೆರಿಗೆಗಳನ್ನು ಎಷ್ಟೇ ಹಾಕಿದರೂ ಕೂಡ ನಮ್ಮ ಖರ್ಚು ಎಷ್ಟಿದೆಯೋ ಅಷ್ಟರ ಮಟ್ಟಿಗೆ ಹುಟ್ಟುವಳಿಯನ್ನು ರೂಢಿಸಿಕೊಳ್ಳುವುದಕ್ಕೆ ನಮ್ಮ ರಾಜ್ಯಕ್ಕೆ ಸಾಧ್ಯವೇ ಆಗಿಲ್ಲ. ಬಹಳವಾಗಿ ನಾವು ಕೇಂದ್ರದಿಂದ ಸಾಲ ಮತ್ತು ನಹಾಯದ ಹಣಕಾಸಿನ ನೆರವನ್ನು ಪಡೆದು ನಮ್ಮ ಕೊರತೆಯನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಈ ರೀತಿಯಾಗಿ ಆದಾಯವೆಚ್ಚವನ್ನು ಸರಿತೂಗಿಸುವುದಕ್ಕೆ ಏನು ಪ್ರಯತ್ನ ನಡೆದಿದೆಯೋ ಅದು ಪರಿಣಾಮದಲ್ಲಿ ಈ ರಾಜ್ಯವನ್ನು ಆರ್ಥಿಕ ಅಧೋಗತಿಗೆ ಈಡುಮಾಡುತ್ತದೆಂಬ ಭಯ ಯಾಪಾಗಲೂ ಇದ್ದೇ ಇದೆ. ಕೆಲವರು ಆರ್ಥಿಕ ತಜ್ಞರು ನಮಗೆ ಅಭಯದ ಮಾತುಗಳನ್ನು ಹೇಳುವುದನ್ನು ಕೇಳಿದ್ದೇವೆ. ಅವರು ಹೇಳುತ್ತಾರೆ, ಒಂದು ಆರ್ಥಿಕವಾಗಿ ಹಿಂದುಳಿದ

(ಶ್ರೀ ಎಸ್. ಗೋಪಾಲಗೌಡ)

ದೇಶದಲ್ಲಿ ಮತ್ತು ಬೆಳೆಯುತ್ತಿರತಕ್ಕ, ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಸಾಮಾನ್ಯ ವಾರ್ಷಿಕ ಆದಾಯಕ್ಕಿಂತ ಹೆಚ್ಚಿಗೆ ಖರ್ಚಿರುವುದೂ, ಕೊರತೆಯನ್ನು ಇಟ್ಟುಕೊಳ್ಳುವುದೂ ಅನಿವಾರ್ಯ ವಾಗುತ್ತದೆ; ಅದರಿಂದ ರಾಷ್ಟ್ರಕ್ಕೆ ಯಾವ ಗಂಡಾಂತರವೂ ಉಂಟಾಗುವುದಿಲ್ಲ. ಕಾಲಕ್ರಮೇಣ ಉತ್ಪಾದನೆ ಹೆಚ್ಚುತ್ತಾ ಹೋಗುತ್ತದೆ. ಆಗ್ಗೆ ಕೊರತೆಯಿಂದ ದಾಟಿಕೊಳ್ಳುವುದಕ್ಕೆ ಮತ್ತು ದೇಶವೂ ಪ್ರಗತಿಹೊಂದುವುದಕ್ಕೆ ಸಾಧ್ಯವಾಗುತ್ತದೆಂದು ವಾದ ಮಾಡುತ್ತಾರೆ. ಅಷ್ಟುಮಾತ್ರವೇಅಲ್ಲ. ಹಣಕಾಸಿನ ವಿಷಯದಲ್ಲಿ ಕೆಲವರು ಆರ್ಥಿಕ ತಜ್ಞರು ಸಾಂಪ್ರದಾಯಿಕವಾಗಿ ಬೆಳೆದುಬಂದಿರತಕ್ಕ ನೋಟುಗಳ ಚಲಾವಣೆಯ ವಿಷಯದಲ್ಲೂ ಕೂಡ ಮತ್ತು ಕರೆನ್ಸಿ ವಿಷಯದಲ್ಲೂ ಕೂಡ ಹೊಸ ಒಂದು ಹಾದಿಯನ್ನು ತುಳಿಯುವುದರಲ್ಲಿ ಅಪಾಯವಿಲ್ಲವೆಂದು ಹೇಳುತ್ತೇನೆ.

Mr. SPEAKER.—The Hon'ble Member had Participated in the debate on Demands for about an hour. This is an Appropriation Bill and the Hon'ble Member must be more specific as covered by rules.

ಶ್ರೀ ಎಸ್. ಗೋಪಾಲಗೌಡ.—ನಾನು ಈ ಮನೂದೆಯ ಮೇಲೆ ಮಾತನಾಡುತ್ತಾ, ಅಪ್ರೋಪ್ರಿಯೇಷನ್ ಬಿಲ್ಲಿಗೆ ಸಂಬಂಧಪಟ್ಟ "Vote on account" ಬಗ್ಗೆ ಕೆಲವು ವಿಷಯಗಳನ್ನು ಮಾತನಾಡಲು ಬಯಸುತ್ತೇನೆ.ನಾನು ಯಾವಾಗ ಮಾತನಾಡಿದರೂಪ್ರಸ್ತಾಪ ಮಾಡಿದ ವಿಷಯಗಳನ್ನ ಪುನರಾವರ್ತಿ ಮಾತನಾಡದೆ ಮುಖ್ಯ ವಿಷಯಗಳನ್ನುಮಾತ್ರ ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ. ಈ ಮನೂದೆಯ ಬಗ್ಗೆ ಕಾಲದ ಮಿತಿ ಇರುವುದರಿಂದ ಇದನ್ನು ಈ ದಿವಸವೇ ಮುಂಜೂರು ಮಾಡಬೇಕೆಂಬುದನ್ನು ನಾನು ತಿಳಿದುಕೊಂಡಿದ್ದೇವೆ. ಕಾಲ ಅದಕ್ಕಿಂತ ಹೆಚ್ಚು ಇದೆಯೆಂದು ನಾನು ತಿಳಿದುಕೊಂಡಿಲ್ಲ.

Mr. SPEAKER.—Generally on an Appropriation Bill, not much time is taken; not that debate is shut out, but most of the points will have been covered already and what is more, it is only a Vote on Account and the basic principles can be restated if necessary when the specific demands and discussion on general demands are taken up.

ಶ್ರೀ ಎಸ್. ಗೋಪಾಲಗೌಡ.—ಯಾವುದು ಸ್ಯಾಮಿ ಜನರಲ್ ಡಿಮ್ಯಾಂಡ್ಸ್? ಅದು ಚರ್ಚೆಗೆ ಯಾವತ್ತು ಇದೆ? ಆಗಸ್ಟ್‌ನಲ್ಲ ಅಧಿವೇಶನವನ್ನು ಕರೆದಾಗಲೋ ಅಥವಾ ಈಗಲೋ? ಸಾಮಾನ್ಯ ಚರ್ಚೆ ಬಡ್ಜೆಟ್ ಮೇಲೆ ಎಂದು ಬರುತ್ತದೆ?

ಅಧ್ಯಕ್ಷರು.—ಅದು ಆಗಸ್ಟ್ ತಿಂಗಳವರೆಗೆ ಹೋಗುವುದಿಲ್ಲ; ಅದಷ್ಟು ಬೇಗ ಚರ್ಚೆಯಾಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ಇದು ನಾಲ್ಕು ತಿಂಗಳುಗಳಿಗೆ ಮಾತ್ರ ಇನೆ. ಆಮೇಲೆ ಬಡ್ಜೆಟ್‌ಮೇಲೆ ಸಾಮಾನ್ಯ ಚರ್ಚೆ ನಡೆಯಲೇಬೇಕು.

ಶ್ರೀ ಎಸ್. ಗೋಪಾಲಗೌಡ.—ಅಧ್ಯಕ್ಷರ ಸೂಚನೆಯನ್ನು ಗಮನದಲ್ಲಟ್ಟುಕೊಂಡು ಅದಷ್ಟು ಬೇಗ ನನ್ನ ಭಾಷಣವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಹೇಳಿರುವುದನ್ನೇ ಪುನಃ ಹೇಳದೇ ಇರುವುದಕ್ಕೆ ಪ್ರಯತ್ನಮಾಡುತ್ತೇನೆ. ಹಣಕಾಸಿನ ವಿಷಯದಲ್ಲಿ ನಾನು ನೋಟುಗಳ ಚಲಾವಣೆ ಸಂಬಂಧವಾಗಿ ಹೇಳುತ್ತಿದ್ದೆ. ಎಷ್ಟು ಹಣವನ್ನು ಪ್ರತಿದಿವಸ ನಾವು ರಿಸರ್ವ್‌ಬ್ಯಾಂಕಿನಿಂದ ಹೊರಗಡೆಗೆ ಚಲಾವಣೆಗೆ ಕೊಡುತ್ತೇವೋ ಅಷ್ಟು ಆ ದಿನದ ಒಂದು ದರದಲ್ಲಿ ಬಂಗಾರ ಯಾವತ್ತೂ ರಿಜರ್ವ್ ಬ್ಯಾಂಕಿನಲ್ಲರಬೇಕು ಎಂದು ನಿಯಮವಿದೆ. ಈ ಬಗ್ಗೆ ಸಾಮಾನ್ಯ ನಿಯಮವನ್ನೇನೂ ನಾವು ಅನುಸರಿಸಬೇಕಾಗುದಿಲ್ಲ. ಆ ಪ್ರಕಾರ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನೋಡುವುದಾದರೆ, ಚಲಾವಣೆಯಲ್ಲರತಕ್ಕ ನೋಟುಗಳ ಪ್ರಮಾಣ ಮತ್ತು ನಮ್ಮಲ್ಲರತಕ್ಕ ಬಂಗಾರ–ಇದನ್ನು ಲೆಕ್ಕಹಾಕುವುದಾದರೆ ನೋಟುಗಳ ಚಲಾವಣೆ ಬಹಳ ಹೆಚ್ಚಳವಾಗಿದೆ. ಅದಕ್ಕೂ ಅವರು ಒಂದು ಸಮಾಧಾನವನ್ನು ಹೇಳುತ್ತಾರೆ. ರಾಷ್ಟ್ರದಲ್ಲಿ ಅನೇಕ ತರದ ಸಂಪತ್ತು ಇರುವಾಗ ಬರೀ ಬಂಗಾರವೇ ಆಸ್ತಿ ಎಂದೇನೂ ಇಲ್ಲ; ಇಂಡಿಯಾದೇಶ ಆರ್ಥಿಕವಾಗಿ ದಿವಾಳಿ ಹೋಗತಕ್ಕ ಪ್ರಶ್ನೆ ಇರುವುದಿಲ್ಲ ಎಂದು. ಪ್ರತಿಯೊಂದು ನೋಟಿನಲ್ಲಿಯೂ "I promise to pay a sum of Rs." 100 or a sum of Rs. 1000 ರೂಪಾಯಿ ಎಂದು ಇದೆ, ಅದಕ್ಕೆ ಬಂಗಾರವನ್ನು ಅಂದಿನ ದರದಲ್ಲಿ ಬ್ಯಾಂಕಿನಲ್ಲಡಬೇಕೆಂಬುದು ನಿಯಮ ಹೇಳಬಹುದು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಆರ್ಥಿಕ ವ್ಯವಸ್ಥೆಯಲ್ಲಿ ನಮ್ಮ ದೇಶ ಯಾವ ಸ್ಥಿತಿಯಲ್ಲಿದೆ, ಯಾವ ಸ್ಟೇಜಿಗೆ ಹೋಗುತ್ತಿದೆ ಎನ್ನುವುದನ್ನು ಈಗ ಮುಖ್ಯವಾಗಿ ತಿಳಿಯಬೇಕಾಗಿದೆ. ಅದರಿಂದಾಗಿ ಯೋಜನೆಗಳಿಗಾಗಿ ನಾವು ಖರ್ಚುಮಾಡುವ ಹಣ ಹೊರಗಡೆಯಿಂದ ಅಥವಾ ಪರದೇಶಗಳಿಂದ ತರತಕ್ಕ ಸಾಲ ಹಾಗೂ ನಮ್ಮ ದೇಶದಲ್ಲಿ ಎತ್ತತಕ್ಕ ಸಾರ್ವಜನಿಕ ಹಣ, ಜೊತೆಗೆ ಹೊಸದಾಗಿ ಜನರ ಮೇಲೆ ಹಾಕತಕ್ಕ ಅನೇಕ ತೆರಿಗೆಗಳು–ಇವೆಲ್ಲವೂ ಸೇರಿ ನಮ್ಮ ಹಣಕಾಸಿನ ವ್ಯವಸ್ಥೆಯನ್ನು ಸರಿತೂಗಿಸುವುದಕ್ಕೆ ಆಗದೇ ಇರುವುದು ಒಂದು ಕಡೆ, ಇನ್ನೊಂದು ಕಡೆ ನಮ್ಮ ಯೋಜನೆಗಳು ಕೆಲವು ಫಲಕೊಡತಕ್ಕವುಗಳು ಉತ್ಪಾದನೆಯನ್ನು ಹೆಚ್ಚಿನತಕ್ಕವುಗಳು, ಮತ್ತೆ ಕೆಲವು ಉತ್ಪಾದನೆಗೆ ಸಂಬಂಧಪಡದೆ ಇರುವಂತಹುಗಳು ಹಾಗೂ ತಕ್ಷಣ ಫಲ ಕೊಡದೇ ಇರುವಂತಹವುಗಳು. ವಸ್ತುಸ್ಥಿತಿ, ಏನೆಂದರೆ, ಹಣ ಅಂದರೆ ನೋಟು ತನ್ನ ಬೆಲೆಯನ್ನು ಕಳೆದುಕೊಂಡಿದೆ ಮತ್ತು ಪ್ರತಿಯೊಬ್ಬನಿಗೂ ಕೊಂಡು ಕೊಳ್ಳುವ ಶಕ್ತಿ ಕಡಮೆಯಾಗಿದೆ. ಈ ಹಣದುಬ್ಬರದ ದೆಸೆಯಿಂದ ಪ್ರತಿವರ್ಷವೂ ವಸ್ತುಗಳ ಬೆಲೆ ಒಂದೇ ನಮನೆ ಏರುತ್ತಿದೆ. ಆದರಲ್ಲೂ ಅವಶ್ಯಕವಾದಂಥ ವಸ್ತುಗಳ ಬೆಲೆಯನ್ನು 38, 48, 58 ಈ ಮೂರು ಇನವಿಯ ಘಟ್ಟಗಳನ್ನು ಇಟ್ಟುಕೊಂಡು ವಿಚಾರ ಮಾಡುವುದಾದರೆ ಕೆಲವು ವಸ್ತುಗಳ ಬೆಲೆ ಒಂದಕ್ಕೆ ಹತ್ತರಷ್ಟು ಇಪ್ಪತ್ತರಷ್ಟು ಏರಿರತಕ್ಕದನ್ನು ನಾವು ನೋಡುತ್ತಿದ್ದೇವೆ. ವಸ್ತುಗಳ ಬೆಲೆ ಯಾವ ರೀತಿ ಏರುತ್ತಾ ಹೋಗುತ್ತದೆಯೋ ಅದೇರೀತಿ ಪ್ರತಿಯೊಬ್ಬನ ಆದಾಯವೂ ಏರುತ್ತಾ ಹೋದರೆ ಅದರಿಂದ ಅಷ್ಟಾಗಿ ಕೆಟ್ಟ ಪರಿಣಾಮವಾಗಲಾರದು. ಆದರೆ ಆದಾಯ ಸ್ಥಿರವಾಗಿದ್ದು ನಿರ್ದಿಷ್ಟವಾಗಿದ್ದು ಬೆಲೆಗಳು ಏರುತ್ತಾ ಹೋದಾಗ ಪ್ರತಿಯೊಂದು ಸಂಸಾರದ ಆಯವ್ಯಯದಲ್ಲೂ ಕೂಡ ಕೊರತೆ ಬೀಳುತ್ತದೆ ಮತ್ತು ಏರುಪೇರು ಕಂಡುಬರುತ್ತದೆ. ಅಂಥಾದ್ದನ್ನು ಆಗ ಸರಿಪಡಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಇವೊತ್ತು ಇಡೀ

ದೇಶದಲ್ಲಿ ಹಣದುಬ್ಬರದಿಂದ ಬೆಲೆಗಳು ಏರುತ್ತಿರುವುದರಿಂದ ಜನರ ಜೀವನ ದುರ್ಭರವಾಗತಕ್ಕ ಪರಿಸ್ಥಿತಿಗೆ ಬಂದು ಮುಟ್ಟಿದ್ದೇವೆ. ಇನ್ನೊಂದು ಕಡೆ ಯೋಜನೆಗಳನ್ನು ಹೆಚ್ಚು ಹೆಚ್ಚಾಗಿ ದಿನೇದಿನೇ ದೊಡ್ಡದಾಗಿ ವಿಸ್ತರಿಸಿಕೊಂಡು ಹೋಗುತ್ತಿದ್ದೇವೆ.

ಆದರೆ ನಾವು ಇದುವರೆಗೂ ಒದಗಿಸಿರುವ ಬಂಡವಾಳದಲ್ಲಿ ಅದು ಎಷ್ಟು ಫಲವನ್ನು ಕೊಡಬೇಕೋ ಅಷ್ಟು ಫಲವನ್ನು ಕೊಡುತ್ತಿಲ್ಲ. ಆ ಯೋಜನೆಗಳೆಲ್ಲಾ ಅರ್ಧಮರ್ಧವಾಗಿಯೇ ನಿಂತಿವೆ. ಈ ರೀತಿ ಅರ್ಧಮರ್ಧವಾಗಿರುವ ಯೋಜನೆಗಳನ್ನು ಮುಗಿಸುವುದಕ್ಕೆ ನಮ್ಮಲ್ಲಿ ಹಣ ಮತ್ತು ಆಹಾರ ಬೆಳೆಯುವ ಶಕ್ತಿ ಇಲ್ಲದೇ ಇರುವ ಪರಿಸ್ಥಿತಿಯನ್ನು ಅನೇಕಸಾರಿ ಕಾಣುತ್ತೇವೆ. ಮುಖ್ಯವಾಗಿ ಇನ್ನು ಶರಾವತಿ ವ್ಯಾಲಿ ಪ್ರಾಜೆಕ್ಟನ್ನು ತೆಗದುಕೊಂಡು ಅದನ್ನು ಬೇಗ ಮಾಡಿ ಮುಗಿಸುತ್ತೇವೆಂದು ಶ್ರೀಮಾನ್ ಚನ್ನಬಸಪ್ಪನವರು ಹೇಳಿದರು ಮತ್ತು ಆಶ್ವಾಸನೆಯನ್ನೂ ಸಹ ಕೊಟ್ಟಿದ್ದರು. ಆದರೆ ನಮ್ಮ ಮಾನ್ಯ ಮಂತ್ರಿಗಳು ಪರದೇಶಗಳಿಂದ ನಮಗೆ ಅನೇಕ ವಸ್ತುಗಳು ಬರಬೇಕಾಗಿವೆ. ಅವು ಬಂದಕೂಡಲೆ ಹೆಚ್ಚಿಗೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಈಗ ಸದ್ಯಕ್ಕೆ ಅದು ಆಗಲಿಲ್ಲ. ನಮಗೆ ಬರುತ್ತಿದ್ದ ಸಾಮಾನುಗಳ ಹಡಗೇ ಮುಳುಗಿ ಹೋಯಿತು ಎಂದು ಹೇಳುತ್ತಿದ್ದಾರೆ. ಅದೆಲ್ಲಾ ನಿಜವಿರಬಹುದು. ಜೊತೆಗೆ ನಮಗೆ ಫಾರಿನ್ ಎಕ್ಸ್‌ಚೇಂಜು ಕೊರತೆ ಬಹಳವಾಗಿದೆ. ನಮ್ಮಲ್ಲಿ ದುಡ್ಡು ಇದ್ದರೂ ಜರ್ಮನಿ ಮತ್ತು ಅಮೇರಿಕಾ ಮುಂತಾದ ದೇಶಗಳಿಗೆ ಹೋಗಿ ನೇರವಾಗಿ ಆ ದುಡ್ಡಿನಿಂದ ಏನನ್ನೂ ಕೊಂಡು ಕೊಂಡು ಬರುವುದಕ್ಕಾಗುವುದಿಲ್ಲ, ನಾವು ಅವರಿಗೇನಾದರೂ ವಸ್ತುಗಳನ್ನು ಕೊಡಲೇಬೇಕು. ಇಲ್ಲದಿದ್ದರೆ ಅವರು ನಮಗೆ ಹೇಗೆ, ಏನಾದರೂ ವಸ್ತುಗಳನ್ನು ಕೊಡಲು ಸಾಧ್ಯ? ಇಂತಹ ಸಂದರ್ಭದಲ್ಲಿ ಪರದೇಶದ ಹಣವನ್ನೇ ನಂಬಿಕೊಂಡು ಇನ್ನೂ ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ಇವರು ಪ್ರಾರಂಭ ಮಾಡಿದ್ದಾರೆ. ಅಲ್ಲಿ ನಮಗೆ ಬೇಕಾದ ಮುಖ್ಯ ವಸ್ತುಗಳು ದೊರೆಯದೆ ಹೋದಾಗ್ಗೆ ನಮ್ಮ ಕೆಲಸಕಾರ್ಯಗಳು ಖಂಡಿತವಾಗಿ ಮುಂದುವರಿಯದೆ ಹೋಗುತ್ತವೆ. ಆದಾಗ್ಯೂ ಪ್ರತಿವರ್ಷವೂ ಲಕ್ಷಾಂತರ ರೂಪಾಯಿಗಳನ್ನು ನಾವು ಅನಾವಶ್ಯಕವಾಗಿ ವೆಚ್ಚ ಮಾಡಬೇಕಾಗುತ್ತದೆ. ಅದನ್ನು ಯಾವ ರೀತಿಯಲ್ಲೂ ತಡೆಗಟ್ಟುವುದಕ್ಕಾಗುವುದಿಲ್ಲ. ಅಲ್ಲದೆ ಈಗ ಶರಾವತಿ ವ್ಯಾಲಿ ಪ್ರಾಜೆಕ್ಟಿನ ಕೆಲಸಕಾರ್ಯಗಳು ಪೂರ್ತಿಯಾಗಿ ಮುಗಿದ ಹೊರತು ಅಲ್ಲಿನ ಸಿಬ್ಬಂದಿಗೆ ಮತ್ತು ಇತರ ಕೆಲಸಗಳಿಗೆ ಖರ್ಚುಮಾಡುವುದನ್ನು ಯಾವ ರೀತಿಯಲ್ಲೂ ನಿಲ್ಲಿಸುವುದಕ್ಕಾಗುವುದಿಲ್ಲ ಮತ್ತು ತಡೆಗಟ್ಟುವುದಕ್ಕೂ ಆಗುವುದಿಲ್ಲ.

ಯೋಜನೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಯೋಜನೆ ಏನೋ ಸಿದ್ಧವಾಗುತ್ತಾ ಇದೆ; ವಿನ್ಯಾಸಣ್ ಆಗುತ್ತಾ ಇದೆ, ಬೆಳೆಯುತ್ತ ಇದೆ; ಮುಂದುವರಿಯುತ್ತಾ ಇದೆ. ಆದರೆ ಈ ಯೋಜನೆ ಇದೇ ರೀತಿಯಲ್ಲಿ ಮುಂದುವರಿಯುವುದಕ್ಕೆ ಅಸಾಧ್ಯವಾಗುತ್ತದೆ. ಅದನ್ನು ನಮ್ಮಲ್ಲರತಕ್ಕ ಕಾರ್ಯಗತಮಾಡತಕ್ಕ ಒಂದು ಶಕ್ತಿಯ ಆಧಾರದ ಮೇಲೆ ಪುನರ್ರಚಿಸಿಕೊಳ್ಳಬೇಕಾಗುತ್ತದೆ. ಮತ್ತು ತಕ್ಷಣ ಫಲವನ್ನು ಕೊಡತಕ್ಕ ಹಾಗೂ ಅದೇಕಾಲಕ್ಕೆ ಇವತ್ತು ತೊಂದರೆಗೆ ಈಡಾಗಿರತಕ್ಕ ಸಂಸಾರಗಳಿಗೆ ಮಾನವೀಯ ದೃಷ್ಟಿಯಿಂದ ಪರಿಹಾರ ಒದಗಿಸಬೇಕಾಗಿರತಕ್ಕ ಸಮಸ್ಯೆಗೆ ಹೆಚ್ಚು ಗಮನವನ್ನು ನಾವು ಕೊಡಬೇಕಾಗುತ್ತದೆ. ಏಕೆಂದರೆ ಇವತ್ತು ಎಷ್ಟೋ ಸಮಸ್ಯೆಗಳು ಉರಿಯುತ್ತಿರತಕ್ಕ ಸಮಸ್ಯೆಗಳಾಗಿವೆ. ನಾವು ಯೋಜನೆ ಮಾಡುತ್ತಾ ಇದ್ದೇವೆ. ಅದು ಫಲಕೊಟ್ಟಾಗ ಎಲ್ಲರಿಗೂ ಅನುಕೂಲವಾಗಿಯೇ ಆಗುತ್ತದೆ ಎಂಬ ಒಂದು ದೊಡ್ಡ ಆಶ್ವಾಸನೆ ಅಥವಾ ಭರವಸೆಯ ಮೇಲೆ ತಳ್ಳಿಕೊಂಡು ಹೋಗುತ್ತಾ ಇದ್ದೇವೆ. ಅನೇಕ ಸಮಸ್ಯೆಗಳನ್ನು ಅಂಥಾ ಒಂದು ಭರವಸೆಯ ಮೇಲೆ ಮುಂದೆ ಮುಂದೆ ದೂಡುತ್ತಾ ಹೋಗುತ್ತಿದ್ದೇವೆ. ಇದರಿಂದ ದೇಶದಲ್ಲಿ ಅನಂಖ್ಯಾತ ಜನರು ಅನುಭವಿಸಲಾರದ, ಹೇಳಿಕೊಳ್ಳಲಾರದ ನೋವು, ಸಂಕಟ ಅನುಭವಿಸುತ್ತಿದ್ದಾರೆ, ಅವರಿಗೆ ತಕ್ಷಣ ಪರಿಹಾರ ಕೊಡಬೇಕು. ಉದಾಹರಣೆ ಹೇಳಬೇಕೆಂದರೆ ನಣ್ಣ ನೌಕರರು ಇದ್ದಾರೆ. ಇವತ್ತು ಸಚಿವರ ಭಾಷಣದಲ್ಲಿ ಅವರ ಬಗ್ಗೆ ನಮಗೆ ಯಾವ ಭರವಸೆಯೂ ದೊರೆಯಲಿಲ್ಲ. ನಣ್ಣ ನೌಕರರ ಬಗ್ಗೆ ಯಾವುದೇ ರೀತಿಯಲ್ಲಿ ನಂಬಳವನ್ನು ಹೆಚ್ಚಿಸುವುದಕ್ಕಾಗುವುದಿಲ್ಲ ಒಂದು ಸಲ ಹೆಚ್ಚಿಸಿದ್ದರಿಂದಲೇ ೭-೮ ಕೋಟಿ ರೂಪಾಯಿ ಹೆಚ್ಚಿಗೆ ಖರ್ಚು ಆಗುತ್ತಿದೆ ಎಂದು ಹೇಳಿದರು ಅದು ವಾಸ್ತವ. ಆದರೆ ಈ ನಣ್ಣ ನೌಕರರು ಎನ್ನುವವರು ೧೦೦ ರೂಪಾಯಿಗಳಿಗಿಂತ ಕಡಮೆ ನಂಬಳ ಪಡೆಯತಕ್ಕವರು. ಬೆಂಗಳೂರಿನಂಥಾ ಒಂದು ಕಡೆ ಪ್ರಾಮಾಣಿಕವಾಗಿ ನಾಲ್ಕು ಐದು ಜನರ ತಮ್ಮ ಸಂಸಾರವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವೇ ಎನ್ನುವುದು ಯೋಚಿಸಬೇಕಾದಂತಹ ಒಂದು ದೊಡ್ಡ ಪ್ರಶ್ನೆ. ಈ ಪ್ರಶ್ನೆಗೆ ನಿಜವಾಗಿಯೂ ನಾವು ಯಾವಾಗ ಗಮನಕೊಡಬೇಕೆನ್ನುವುದು ಅಥವಾ ಕೊಡುತ್ತೇವೆ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಏಕೆಂದರೆ ಅವರು ಬದುಕಿರಬೇಕಲ್ಲಾ! ನಿಮ್ಮ ಸುಖೀರಾಜ್ಯವನ್ನು, ನಿಮ್ಮ ರಾಮರಾಜ್ಯವನ್ನು ನೋಡುವುದಕ್ಕೆ ಜನ ಬದುಕಿರಬೇಕು ಎಂದು ತಮ್ಮ ಅಭಿಪ್ರಾಯವಾದಾಗ ಅವರಕುಟುಂಬಗಳು ನಿರ್ನಾಮವಾಗದಂತೆ, ದಾರಿ ಪಾಲು ಆಗದಂತೆ ಅವರು ನಿಮ್ಮ ಸುಖೀರಾಜ್ಯದಲ್ಲಿ ಹೊರೆ ಆಗದಂತೆ ಅವರನ್ನು ಬೆಳೆಸಿಕೊಂಡು ಹೋಗುವುದು ಬಹಳ ಅವಶ್ಯಕ. ಏಕೆಂದರೆ ಈಗ ನಾವು ಸುಖೀರಾಜ್ಯವನ್ನು ಕಟ್ಟಬೇಕೆಂದು, ಕಾಣಬೇಕೆಂದು ಹೇಳುತ್ತಾ ಇರುವುದು ಜನರಿಗಾಗಿಯೇ; ಇವೊತ್ತು ಇರುವವರಿಗೆ, ನಾಳೆ ಹುಟ್ಟುವವರಿಗೆ, ಬದುಕಿರುವವರಿಗೆ, ಮಾಡುತ್ತಾ ಇದ್ದೇವೆ. ಆದ್ದರಿಂದ ಅಂಥಾ ಜನರು ಯಾರು ಇದ್ದಾರೋ ಯಾರಿಗೆ ಇವತ್ತು ೧೦೦ ರೂಪಾಯಿಗಿಂತ ಕಡಿಮೆ ವರಮಾನ ಇದೆ ಅಂಥವರ ಬಗ್ಗೆ ನರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ? ೧೫೦ ಕೋಟಿ ರೂಪಾಯಿ ಹಣವನ್ನು ತಾವು ಕೇಳುತ್ತೀರಿ, ವೆಚ್ಚ, ಮಾಡುತ್ತೀರಿ. ಇದರಲ್ಲಿ ನಿರ್ದಿಷ್ಟವಾದ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ? ಅವರಿಗೇನಾದರೂ ಕಡಮೆ ಬೆಲೆಯಲ್ಲಿ ಆಹಾರ ವಸ್ತುಗಳನ್ನು ದಿನ ಬಳಕೆಯ ವಸ್ತುಗಳನ್ನು ಒದಗಿಸುವ ಒಂದು ವ್ಯವಸ್ಥೆಯನ್ನು ಮಾಡಿದ್ದೀರಾ? ಅವರ ಮಕ್ಕಳು ಮರಿಗಳಿಗೆಲ್ಲಾ, ಅವರು ಎಲ್ಲೇ ಇರಲಿ.....

Mr. SPEAKER.—The Bill before the House is the Appropriation (Vote on Account) Bill. The convention is that debate shall take place on the Demands themselves. There is very little scope for further discussion on this Appropriation Bill. I would remind the Hon'ble member that this is only

(MR. SPEAKER)

an Appropriation Bill. We are already one day behind the schedule. The time allotted for the Vote on Account was extended by one day. The Hon'ble member has taken about twenty minutes. I want to know how many more members wish to take part in the dsicussion on the Appropriation Bill. If there are many members it will not be easy to finish the business early and I may have to cut short the debate.

ಶ್ರೀ ಎಸ್ ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ತಾವುಕೊಟ್ಟ ಸೂಚನೆಯನ್ನು ಬಹಳ ಲಕ್ಷ್ಯಪಟ್ಟು ಕೇಳಿದ್ದೇನೆ. ಅಪ್ರೊಪ್ರಿಯೇಷನ್ ಬಿಲ್ಲನ್ನು ಚರ್ಚೆ ಮಾಡದೇ ಅಂಗೀಕರಿಸಬೇಕೆನ್ನುವ ನಿಯಮ ಅಥವಾ ಸಂಪ್ರದಾಯ ಇದೆ ಎಂದು ನಾನು ತಿಳಿದುಕೊಳ್ಳುವುದಿಲ್ಲ, ತಿಳಿದುಕೊಂಡಿಲ್ಲ. ಚರ್ಚೆ ಮಾಡಬೇಕಾಗಿದೆ. ಆದರೆ ಈ ಮನೂದೆಯನ್ನು ಬೇರೆ ಮನೂದೆಗಳಂತೆ—ಬೇರೆ ಮನೂದೆಗಳಿಗೆ ಸಮಾನ್ಯವಾಗಿ ಕಾಲನಿಯಂತ್ರಣ ವಿರುವುದಿಲ್ಲ 2-3 ದಿವಸಬೇಕಾದರೂ ಮಾತನಾಡ ಬಹುದು—ಹಾಗೆ ಮುಂದುವರಿಸಿಕೊಂಡು ಹೋಗ ಬಾರದು, ಈ ದಿವಸದ ಕಾರ್ಯಕ್ರಮದ ಕೊನೆಯಲ್ಲೇ ಅಂಗೀಕಾರ ಮಾಡಬೇಕೆಂಬುದು ಸಂಪ್ರದಾಯ ಎಂದು ತಿಳಿದುಕೊಂಡಿದ್ದೇನೆ. ಆ ಪ್ರಕಾರ ಯಾವತ್ತು ಮನೂದೆ ಬರುತ್ತದೆಯೋ ಅದೇ ದಿವಸ ಅಪ್ರೊಪ್ರಿಯೇಷನ್ ಬಿಲ್ ಪಾಸ್ ಆಗಬೇಕೆಂದಿದೆ..... ...

*Sri S. R. KANTHI.—In this connection I am in a position to contradict my friend on the other side. In the House of Commons the Appropriation Bill is passed in five minutes and in the Lok Sabha it does not take more than half an hour. So, discussion on this Bill need not take much time, especially when the hon'ble members have taken some time for discussion on the vote on Account. I request the members on the other side to take the opportunity of discussing on the Demands. There will be ample scope to take part within the discussion Budget. I request that the convention must be adhered to as far as possible.

Mr. SPEAKER.—May I know what the Leader of the Opposition has to say in this matter ?

Sri S. SIVAPPA (Shravanabelgola).—Rule 174 (2) says :

"At any time after the introduction in the Assembly of an Appropriation Bill, the Speaker may allot a day or days jointly or severally for the completion of all or any of the stages involved in the passage of the Bill by the Assembly, and when such allotment has been made the Speaker shall at five O'clock....."

So, it all depends upon the discrition of the Chair. It is up to the Speaker to judge the sense of the House and allot time.

Mr. SPEAKER.—I want the Hon'ble members to read sub-clause (4) of rule 174.

"The debate on an Appropriation Bill shall be restricted to matters of public importance or administrative policy implied in the grants covered by the Bill which have not already been raised while the relevant demands for grants were under consideration".

There has been a full and exhaustive discussion. In fact the member will remember that one day was allotted for "Vote on Account" but another day was taken. Therefore I appeal to the members to respect the convention established. What is more, this Appropriation Bill relates to Vote on Account.

1. 30 P.M.

Sri G. VENKATAI GOWDA (Palya).—But the trouble is this what about those demands which have not been discussed and for which you require money to be sanctioned ? Therefore rule 174 (4) would not apply here.

Mr. SPEAKER.—Would the Hon'ble Member remember that the Demands have not come up for discusion ? It is only a "Vote on Account." It is now 1-30 P.M. We will finish the Bill before we get up for lunch. The Hon'ble Member will kindly conclude early so that others also may have a chance.

ಶ್ರೀ ಎಸ್. ಗೋಪಾಲಗೌಡ.—ಈ ನಂದರ್ಭದಲ್ಲಿ ಒಳ್ಳೆಯ ಸಂಪ್ರದಾಯಗಳನ್ನು ಮುರಿಯಬೇಕೆಂದು ನನಗಿಷ್ಟವಿಲ್ಲ. ಸಂಪ್ರದಾಯಗಳನ್ನು ಮುರಿದಿರುವವರು ಅಧಿಕಾರಪಕ್ಷದವರೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಲ್ಲಿ ಹೇಗೆ ಕಾರ್ಯಕಲಾಪಗಳು ನಡೆಯುತ್ತಾ ಹೋಗುತ್ತಿವೆಯೆಂಬುದು ಅಧ್ಯಕ್ಷರಿಗೇ ಗೊತ್ತಿದೆ ; ಇದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ;

ನಾನು ಹೇಳುತ್ತಿದ್ದುದೇನೆಂದರೆ, ಸಾಮಾನ್ಯ ಜನರ ನಿತ್ಯಜೀವನ ಗಂಡಾಂತರಕ್ಕೀಡಾಗಿದೆ. ಇದರ ಬಗ್ಗೆ ಸರ್ಕಾರ ಏನು ನಿರ್ದಿಷ್ಟ ಕಾರ್ಯಕ್ರಮವನ್ನು ಕೈಗೊಂಡಿದೆ ಎನ್ನುವುದಕ್ಕೆ ಈ ಆಯವ್ಯಯ ಪಟ್ಟಿ

*Asterisk indicates that the remarks or speeches have not been revised by the member concerned.

ಯಲ್ಲಿ ಯಾವ ಒಂದು ವಿಶೇಷ ಸೂಚನೆಯೂ ಇಲ್ಲ. ನಾನು ಮೊದಲೇ ಉದಾಹರಣೆ ಹೇಳಿದ ಹಾಗೆ ಕಡಮೆ ಸಂಬಳ ಪಡೆದು ಜೀವಿಸುತ್ತಿರುವ ಕೆಳದರ್ಜೆ, ಮಧ್ಯಮ ವರ್ಗದವರು, ಕೂಲಿನಾಲಿ ಮಾಡಿಕೊಂಡು ಜೀವನ ಮಾಡುವ ಜನರು ಇವರ ಜೀವನ ಬಹಳ ದುಃಖಕ್ಕೀಡಾಗಿದೆ. ಇದನ್ನು ನರಿಪಡಿಸಬೇಕಾದರೆ ಬೆಲೆಗಳನ್ನು ಹಿಡಿತದಲ್ಲಡುವುದು ಮಾತ್ರವಲ್ಲದೆ, ಇವರ ಆದಾಯವನ್ನೂ ಪೂರಕ ಮಾಡುವುದಕ್ಕೆ ಅಥವಾ ಪೂರ್ತಿಗೊಳಿಸುವುದಕ್ಕೆ ಹೆಚ್ಚಿನ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಪ್ರತಿ ವರ್ಷದ ಆದಾಯದಲ್ಲಿ ಹೆಚ್ಚಿನ ಹಣವನ್ನು ಇವರ ಸೌಲಭ್ಯಗಳಿಗಾಗಿ ಖರ್ಚು ಮಾಡಬೇಕಾಗುತ್ತದೆಂಬ ಅಂಶವನ್ನು ಈ ಸಭೆಯ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮಾತಾಡಲು ಕಾಲಾವಕಾಶದ ಪ್ರಶ್ನೆ ಇದ್ದೇ ಇದೆ. ಈ ಹೊತ್ತು ಸರ್ಕಾರದ ಗಮನಕ್ಕೆ ತರಬೇಕಾದ ಸಹಸ್ರಾರು ವಿಷಯಗಳಿವೆ ಅವುಗಳನ್ನೆಲ್ಲಾ ಇಲ್ಲಿ ಹೇಳಲು ನಾನು ಇಷ್ಟಪಡುವುದಿಲ್ಲ. ಅಲ್ಲದೆ ಇದು ಅದಕ್ಕೆ ಸರಿಯಾದ ಸಂದರ್ಭವಲ್ಲವೆಂದೂ ಅಧ್ಯಕ್ಷರು ಸೂಚನೆ ಕೊಟ್ಟಿದ್ದಾರೆ. ಆದರೆ ಈ ಹೊತ್ತು ಈ ಸಭೆಯಲ್ಲಿ ನಾವು ಕರ್ತವ್ಯ ಲೋಪವನ್ನು ಮಾಡುವ ಸ್ಥಿತಿಗೆ ಹೋಗಬೇಕಾಗಿದೆ ಎನ್ನುವುದು ಒಂದು ವಿಷಾದದ ಸಂಗತಿಯಾಗಿದೆ. ಕಾರಣವೇನೆಂದರೆ, ಆಡಳಿತ ಪಕ್ಷದವರು ಇವರಿಗೆ ನಾವಾಗಲೇ ಹೇಳಿರುವಂತೆ, ವೈಯಕ್ತಿಕವಾಗಿ ತಾವು ಮುಂದೆ ಬರಬೇಕು, ತಾವೇ ಆಡಳಿತವನ್ನು ಹೊತ್ತುಕೊಳ್ಳಬೇಕು, ತಮಗೇ ಇದನ್ನು ನಡೆಸುವ ಅವಕಾಶವಿರಲಿ, ತಮಗೆ ಸಾಮರ್ಥ್ಯವಿರಲಿ, ಇಲ್ಲದಿರಲಿ; ಬೆಂಬಲವಿರಲಿ, ಇಲ್ಲದಿರಲಿ ತಾವೇ ಆಡಳಿತ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕು ಎಂದು ನೂಕುನುಗ್ಗಲಿನಲ್ಲಿದ್ದಾರೆ. ಇವರಲ್ಲಿ ದೇಶದ ದೃಷ್ಟಿ ಅಥವಾ ಜನತೆಯ ಹಿತದೃಷ್ಟಿ ಇರುವುದಕ್ಕೆ ಸಾಧ್ಯವಿಲ್ಲ. ಇದನ್ನು ಮಧ್ಯೇ ಮಧ್ಯೇ ತಮಗೆ ಹೇಳಬೇಕಾದ ಅಗತ್ಯವಿಲ್ಲ. ಆದಾಗ್ಯೂ ಈಗ ಇರುವ ಪರಿಸ್ಥಿತಿಯನ್ನು ನೋಡಿದರೆ, ಯಾರಿಗೂ ಒಂದು ಗೌರವ ತರತಕ್ಕ ರೀತಿಯ ಪರಿಸ್ಥಿತಿಯಿಲ್ಲವೆಂದು ಮಾತ್ರ ಹೇಳುತ್ತೇನೆ.

ಇನ್ನು Vote on Account, ಸಂಬಂಧವಾಗಿ ಇಟ್ಟಿರುವ ಅಪ್ರೊಪ್ರಿಯೇಷನ್ ಬಿಲ್ ಇಟ್ಟಿರುವ ರೀತಿ ನೀತಿ, ಇದರಲ್ಲಿರುವ ಹಣವನ್ನು ಖರ್ಚುಮಾಡತಕ್ಕ ಸರ್ಕಾರದ ರೀತಿ ನೀತಿಗಳ ಬಗ್ಗೆ ಜನತೆಯಲ್ಲಿ ತುಂಬಾ ಅಸಮಾಧಾನವಿದೆ. ಇದಕ್ಕೆ ಯಾವುದೇ ರೀತಿಯಲ್ಲಿಯೂ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲವಾದುದರಿಂದ ನಾನು ಈ ಹಣವನ್ನು ಕೇಳುವ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

*ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).— ಅಧ್ಯಕ್ಷರೇ, ಮೈಸೂರು ಅಪ್ರೊಪ್ರಿಯೇಷನ್ (ವೋಟ್ ಆಫ್ ಅಕೌಂಟ್) ಬಿಲ್ ಎಂಬುದು ಸರ್ಕಾರದವರು ದೇಶದ ಆದಾಯವನ್ನು ಖರ್ಚು ಮಾಡಲು ಕಾನೂನು ಬದ್ಧವಾದ ಅಧಿಕಾರವನ್ನು ನಮ್ಮಿಂದ ಪಡೆಯಲು ಮಾಡುತ್ತಿರುವ ಒಂದು ಪ್ರಯತ್ನ. ದೇಶದ ಆದಾಯವನ್ನು ಖರ್ಚುಮಾಡಲು ನಮ್ಮಿಂದ ಮಂಜೂರಾತಿ ಕೇಳುವ ಸಂದರ್ಭದಲ್ಲಿ ಜನರ ಪ್ರತಿನಿಧಿಗಳಾಗಿ ಬಂದಿರತಕ್ಕ ನಾವು ನಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಸಾಕಷ್ಟು ಅವಕಾಶವಿರಬೇಕು. ನಮ್ಮ ಮುಂದೆ ಮಂಡಿಸಿರುವ ಬಡ್ಜೆಟ್ಟನ್ನು ನೋಡಿದರೆ ಇದರಿಂದ ಒಂದು ವಿಷಯ ಬಹಳ ಸ್ಪಷ್ಟವಾಗಿ ತಿಳಿಯುತ್ತದೆ. ಅದೇನೆಂದರೆ, ಇದು ಜೋತಾ ಬಡ್ಜೆಟ್. ಇದರ ಪರಿಣಾಮ ಜನರ ಮೇಲೆ ಏನೆಂಬುದನ್ನು ಅಲೋಚನೆ ಮಾಡಿದರೆ ಗೊತ್ತಾಗುತ್ತದೆ. ಹೋದ ಸಾರಿಯೂ ಜೋತಾ, ಈ ಸಾರಿಯೂ ಜೋತಾ ಬಡ್ಜೆಟ್. ಈ ಜೋತಾ ಬಡ್ಜೆಟ್ಟಿನ ಪರಿಣಾಮವಾಗಿ ಬೆಲೆಗಳು ಇನ್ನೂ ಏರುವುದಕ್ಕೆ ಪ್ರಾರಂಭವಾಗುತ್ತವೆ. ಆದರೆ ಸಾಮಾನ್ಯ ಜನರ ಆದಾಯ, ಅವರ ಸಂಬಳ ಸಾರಿಗೆಗಳು ಇದ್ದ ಮಟ್ಟದಲ್ಲೇ ಇವೆ. ಈ ರೀತಿ ಪದಾರ್ಥಗಳ ಬೆಲೆಗಳು ಏರುವುದಕ್ಕೆ ಅವಕಾಶ ಮಾಡಿದರೆ ಅದರಿಂದ ಸಾಮಾನ್ಯ ಜನರ ಪರಿಸ್ಥಿತಿ ಹದಗೆಟ್ಟು ಅವರು ಜೀವನ ನಡೆಸುವುದು ಮತ್ತಷ್ಟು ಕಷ್ಟವಾಗುತ್ತದೆಂಬುದನ್ನು ಮರೆಯಬಾರದು. ಈ ಬಡ್ಜೆಟ್‌ನಲ್ಲಿರುವ ವಿಷಯವನ್ನು ನೋಡಿದರೆ, ಸರ್ಕಾರದವರು ತೆರಿಗೆಯ ಭಾರವನ್ನು ಯಾರ ಮೇಲೆ ಹೊರಿಸುತ್ತಿದ್ದಾರೆಂಬುದು ವ್ಯಕ್ತವಾಗುತ್ತದೆ. ಪರೋಕ್ಷವಾಗಿ ಜನರಮೇಲೆ 13 ಕೋಟಿ ರೂಪಾಯಿ ಹೆಚ್ಚಿನ ತೆರಿಗೆ ಹಾಕಿ ಹೆಚ್ಚು ಆದಾಯವನ್ನು ನಿರೀಕ್ಷಿಸುತ್ತಿದ್ದಾರೆ. ಇದೇ ರೀತಿ ನೇರವಾದ ತೆರಿಗೆಗಳ ಮೂಲಕ ಮೂರು ಕೋಟಿ ರೂಪಾಯಿ ಹೆಚ್ಚು ಆದಾಯ ಬರುವುದಕ್ಕೆ ಅವಕಾಶವಿದೆ. ಪ್ರತ್ಯಕ್ಷವಾಗಿ ಬರುವ ತೆರಿಗೆ ಆಸ್ತಿವಂತರಿಂದ ಬರತಕ್ಕದ್ದು; ಪರೋಕ್ಷವಾಗಿ ಬರತಕ್ಕದ್ದು ಸಾಮಾನ್ಯ ಜನರಿಂದ ಬರುವ ತೆರಿಗೆ. ಹೀಗೆ ಸಾಮಾನ್ಯ ಜನರ ಮೇಲೆ, ಪದಾರ್ಥಗಳನ್ನು ಕೊಳ್ಳತಕ್ಕ ಜನರ ಮೇಲೆ ಹೆಚ್ಚು ತೆರಿಗೆ ಹೊರಿಸುವುದನ್ನು ನೋಡಿದರೆ, ಈ ಬಡ್ಜೆಟ್ಟು ನಿಜವಾಗಿ ಸಮಾಜವಾದಿ ಬಡ್ಜೆಟ್ ಅಲ್ಲ, ಬಂಡವಾಳಷಾಹಿ ಬಡ್ಜೆಟ್ ಎಂದು ತಿಳಿಸಬೇಕಾಗಿದೆ. ಬೇರೆ ಯಾವ ದೃಷ್ಟಿಯಿಂದ ಈಗಿನ ಸರ್ಕಾರದ ನೀತಿಯನ್ನು ನೋಡುತ್ತ ಹೋದರೆ, ಎಷ್ಟೋ ಹಣವನ್ನು ಖರ್ಚು ಮಾಡುತ್ತಿದ್ದಾರೆ; ಆದರೆ ಸರಿಯಾಗಿ ವಿತರಣೆಯಿಂದ ಎಲ್ಲರಿಗೂ ಒಂದೇರೀತಿ ನ್ಯಾಯ ದೊರಕುವಂತೆ ಖರ್ಚು ಮಾಡುತ್ತಿಲ್ಲ. ಉದಾಹರಣೆಗೆ, ಕೋಲಾರ ಜಿಲ್ಲೆಯ ವಿಷಯವನ್ನು ಹೇಳುವುದಾದರೆ, ಹುಬ್ಬಳ್ಳಿಯಲ್ಲಿ ಒಂದು ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಿದರು, ಧಾರವಾದದಲ್ಲಿ ಒಂದು ಟೆಕ್ನಿಕಲ್ ಕಾಲೇಜಿಗೆ ಹಣವೊದಗಿಸಿದ್ದಾರೆ. ಕೋಲಾರದಲ್ಲಿ ಯಾವ ಯೋಜನೆಯೂ ಇಲ್ಲ. ಎಲ್ಲ ವಿಷಯದಲ್ಲಿಯೂ ಕೋಲಾರ ಜಿಲ್ಲೆಯ ಬಗ್ಗೆ ಮಲತಾಯ ಧೋರಣೆಯನ್ನು ಸರ್ಕಾರದವರು ತೋರಿಸುತ್ತಿದ್ದಾರೆ. ಕೋಲಾರದ ಜಿಲ್ಲೆಯಲ್ಲಿ ಚಿನ್ನದ ಗಣಿ ಇದೆ, ನಾನಾ ರೀತಿಯಲ್ಲಿ ಆ ಜಿಲ್ಲೆಯಿಂದ ಸರ್ಕಾರಕ್ಕೆ ಆದಾಯ ಬರುತ್ತಿದೆ. ಆದರೂ ಅದರ ವಿಷಯದಲ್ಲಿ ಈ ನೀತಿಯನ್ನನುಸರಿಸುತ್ತಿದ್ದಾರೆ. ನಮ್ಮ ಜಿಲ್ಲೆಯ ಜನರೇನೋ ಬಹಳ ಹುಷಾರಾಗಿದ್ದಾರೆ. ಏನಾದರೂ ಮಾಡಿ ಮಂತ್ರಿಗಳ ಸ್ಥಾನಗಳನ್ನ ಗಿಟ್ಟಿಸಿಕೊಳ್ಳುತ್ತಾರೆ. ಕೇಂದ್ರದಲ್ಲಿಯೂ ಇದ್ದಾರೆ, ಇಲ್ಲಿಯ ಮಂತ್ರಿಮಂಡಲದಲ್ಲಿಯೂ ಇದ್ದಾರೆ. ಇನ್ನೊಬ್ಬರು ಪ್ರಯತ್ನ ಮಾಡುತ್ತಿದ್ದಾರೆ, ಏಕೋ ಸಿಕ್ಕುತ್ತಿಲ್ಲ. ಆದರೆ ಸಾಮಾನ್ಯ ಜನರ ಪರಿಸ್ಥಿತಿಯನ್ನು ಆಲೋಚನೆ ಮಾಡಿದರೆ, ಅಲ್ಲಿ ಸರಿಯಾಗಿ ಮಳೆಯಾಗುವುದಿಲ್ಲ. ಒಂದು ವರ್ಷ ಮಳೆಯಾದರೆ, ಎರಡು ವರ್ಷ ಇಲ್ಲ, ಕ್ಷಾಮ ಬರುತ್ತದೆ. ನಾಲ್ಕಾರು ವರ್ಷಗಳಿಂದ ನಾವು ಸರ್ಕಾರವನ್ನು ಒತ್ತಾಯಪಡಿಸುತ್ತಿದ್ದೇವೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಕಾಂಗ್ರೆಸ್ಸಿನವರಿಗೆ ಹಿಂದೆ ಇದ್ದ ಸರ್ಕಾರದವರ ಬೆಂಬಲವಿದ್ದರೂ ಸಹ ಕಮ್ಯೂನಿಸ್ಟ್ ಮತ್ತು ಸ್ವತಂತ್ರ ಪಕ್ಷದವರು ಮಾಡಿದ ಒಂದು ಸಂಯೋಗದಿಂದ ಈ ಸಾರಿ ಚುನಾವಣೆಯ ರಂಗದಲ್ಲಿ ಆರೇಳು ಜನ ವಿರೋಧ ಪಕ್ಷದ ಸದಸ್ಯರು ಗೆದ್ದುಬಂದರು.

Mr. SPEAKER.—How is it relevent to the Appropriation Bill?

Sri P. VENKATAGIRIYAPPA.—It relates to expenditure.

ಕೋಲಾರ ಜಿಲ್ಲೆಯ ಬಗ್ಗೆ ಈ ಒಂದು ಅಪ್ರೋಪ್ರಿಯೇಷನ್ ಬಿಲ್ಲಿನ ಸಂಬಂಧದಲ್ಲಿ ನಾನು ಮಾತನಾಡುತ್ತಿದ್ದೇನೆ. ಹಿಂದೆ ಕೂಡ ನಾನು ಮಾತನಾಡುವಾಗ ಈ ವಿಷಯದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಡಲಿಲ್ಲ. ಈ ಅಪ್ರೋಪ್ರಿಯೇಷನ್ ಬಿಲ್ಲಿನ ಡೆರ್ಜಿಯಲ್ಲಾದರೂ ಕೂಡ ನಮ್ಮ ರಾಜ್ಯದ ಹಣ ಕಾಸಿಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಇದರಲ್ಲಿ ಆಗಿರುವ ಅನ್ಯಾಯವನ್ನು ತಿಳಿಸುವುದಕ್ಕೆ ಅವಕಾಶವುಂಟು. ನಮ್ಮ ಜಿಲ್ಲೆಯಲ್ಲಿ ಮಳೆಬೆಳೆ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಬಾವಿಗಳನ್ನು ಕಟ್ಟಿಸಿ ಕೊಡಬೇಕು. ಸಬ್ಸಿಡಿ ಜಾಸ್ತಿ ಕೊಡಬೇಕು ಎಂದು ನಾಲ್ಕಾರು ವರ್ಷಗಳಿಂದ ನಾವು ಸರ್ಕಾರದವರನ್ನು ಕೇಳುತ್ತಿದ್ದೇವೆ. ಮುಖ್ಯವಾಗಿ ಬಾವಿಗಳಿಗೆ ಸಾಲವನ್ನು ಕೊಡಬೇಕು ಎಂದು ಕೇಳುತ್ತಿದ್ದೇವೆ. ಈ ದಿವಸ ಸರ್ಕಾರದವರು ಒಂದು ಕೆರೆಗೆ ಕೊಡುತ್ತಿರುವ ಹಣ ಸಾಲದು. ಈ ರೀತಿ ನಾನಾ ಬೇಡಿಕೆಗಳನ್ನು ನಾವು ಸರ್ಕಾರದವರ ಮುಂದೆ ಇಟ್ಟಿದ್ದೇವೆ. ಆದರೆ ಸರ್ಕಾರದವರು ಇದರ ಬಗ್ಗೆ ಗಮನವನ್ನು ಕೊಡದೆ ಮಲತಾಯಿ ಧೋರಣೆಯಲ್ಲಿ ಕೋಲಾರದ ಜಿಲ್ಲೆಯನ್ನು ನೋಡುತ್ತಿರುವುದು ಸರಿಯಲ್ಲ. ಬೇರೆ ಜಿಲ್ಲೆಗಳಿಗೆ ಯಾವ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದ್ದಾರೋ ಅದೇ ರೀತಿಯಲ್ಲಿ ನಮ್ಮ ಕೋಲಾರ ಜಿಲ್ಲೆಗೂ ಹಣವನ್ನು ಖರ್ಚು ಮಾಡಬೇಕು. ಕ್ಷಾಮ ಪೀಡಿತ ಪ್ರದೇಶದ ಜನಗಳಿಗೆ ಸಹಾಯವನ್ನು ದೊರಕಿಸಿ ಕೊಡುವ ಹಾಗೆ ಸರ್ಕಾರದ ಬಡ್ಜೆಟ್ ರೂಪಿತವಾಗಬೇಕು ಎಂದು ನಾನು ತಿಳಿಸುತ್ತೇನೆ.

ಇಷ್ಟೇ ಅಲ್ಲದೆ ಇವೊತ್ತಿನ ದಿವಸ ಒಂದು ಮುಖ್ಯ ಪ್ರಶ್ನೆ ಎಂದರೆ ಮಂತ್ರಿಗಳ ನೇಮಕದ ಪ್ರಶ್ನೆ. ನಮ್ಮ ರಾಜ್ಯದ ಒಂದೂವರೆಯಷ್ಟು ಜನಸಂಖ್ಯೆ ಇರುವ ಮದ್ರಾಸಿನಲ್ಲಿ 9 ಜನ ಮಂತ್ರಿಗಳು ಮಾತ್ರ ಇದ್ದಾರೆ. ಅಂಥಾದ್ದರಲ್ಲಿ ನಮ್ಮ ರಾಜ್ಯಕ್ಕೆ 24 ಜನ ಮಂತ್ರಿಗಳು ಏತಕ್ಕೆ ಬೇಕು ? ಇದು ಬಹಳ ಶೋಚನೀಯವಾದ ವಿಚಾರ. ಒಬ್ಬೊಬ್ಬ ಮಂತ್ರಿಗಳಿಗೂ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವರಿಗೆ ಸಂಬಳ ಒಂದು ಸಾವಿರ ರೂಪಾಯಿಗಳಾದರೆ ಭತ್ಯ ಮೂರು ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಇದರ ಜೊತಗೆ ಹೂವಿನ ಹಾರ, ಡಿನ್ನರ್ ಪಾರ್ಟಿ ಇತ್ಯಾದಿಗಳಿಗೆ ಬೇರೆ ಖರ್ಚಾಗುತ್ತದೆ. ಆದ್ದರಿಂದ ಮಂತ್ರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಬಾರದು. ನಮ್ಮ ರಾಜ್ಯಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಮದ್ರಾಸ್ ರಾಜ್ಯದಲ್ಲಿ 9 ಜನ ಮಂತ್ರಿಗಳು ಇರುವುದರಿಂದ ನಮ್ಮ ರಾಜ್ಯದಲ್ಲಿ ಆರು ಜನ ಮಂತ್ರಿಗಳು ಸಾಕು. ನಮ್ಮ ಮೈಸೂರು ರಾಜ್ಯದಲ್ಲಿ ಇಪ್ಪತ್ನಾಲ್ಕು ಜನ ಮಂತ್ರಿಗಳನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ಹೇಳಿ, ಆಡಳಿತ ಪಕ್ಷದವರು ಈ ಅಪ್ರೋಪ್ರಿಯೇಷನ್ (ವೋಟ್ ಆನ್ ಅಕೌಂಟ್ ಬಿಲ್) ಇವುಗಳ ವಿಷಯದಲ್ಲಿ ಹೇಳುವ ನಲಹೆಗಳನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿಲ್ಲ ಎಂದು ಹೇಳುತ್ತೇನೆ. ಬಹುಮತವಿರತಕ್ಕವರು, ಈ ಅಪ್ರೋಪ್ರಿಯೇಷನ್ ಬಿಲ್ ಮತ್ತು ವೋಟ್ ಆನ್ ಅಕೌಂಟಿಗೆ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ. ಸರ್ಕಾರದ ಹಣಕಾಸಿನ ನೀತಿ ಸರಿಯಾಗಿಲ್ಲ. ಆದ್ದರಿಂದ ಇದಕ್ಕೆ ನಮ್ಮ ಸಹಕಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

***Sri G. VENKATAI GOWDA.**—Mr. Speaker, Sir, I would like to say at the outset that the Mysore Appropriation Bill, 1962, does not deserve our support for the reasons that I am going to assign shortly. The policies pursued by this Government especially in the matter of spending lead to an inevitable presumption about the capacity of this Government to spend the amounts in the manner in which this House expects them to be spent. Last year, for instance, this House gave its approval for an expenditure of Rs. 100 crores and odd and again in the course of the year Government came forward to spend Rs. 28 crores and got the approval of this House for the same. So far as the original budget is concerned, they did not spend the amount fully. Out of the sum of Rs. 100 crores provided in the original budget, nearly 25 per cent lapsed with the result that that amount was surrendered. In addition to that, they have spent twenty eight crores of rupees for these works for which this House had not given its sanction in the original budget. They are not in a position to spend the money for the purposes for which this House gave its sanction or in the manner in which this House expects the amounts to be spent. For this reason alone this Bill does not deserve our support.

The second point is that they have asked for nearly Rs. 65 crores to be spent during the course of the year or as stated in the Bill for "part of the financial year 1962-63." It was stated specifically at the time of discussion on the Demands for Grants (Vote on Account) that this amount is needed for service and expenditure likely to be incurred during the months of April, May, June and July. Contrary to this assurance this Bill says that this amount is required for payment during "part of the financial year 1962-63". It is not definite for which period they require this amount. Part of the financial year may mean one month or six months or even nine months. Suppose the Government spends all this amount in one month say in April, what is to be done? So I submit that the omission to mention

the specific period in the Bill alone does not justify the passing of this Bill.

For these two reasons I oppose this Bill.

[Sri BHIMANNA SHIVALINGAPPA (Bhalki) spoke in Urdu.]

Mr. SPEAKER.—My first difficulty is that I have not closely followed the speech. I have already told the House that, so far as the Appropriation Bill is concerned, the scope of the debate is very limited.

Sri B. D. JATTI (Jamkhandi).—He is not referring to anything that is mentioned in the Appropriation Bill.

Sri D. VENKATARAMIAH (Robertsonpet).—Should we not know what he is speaking ?

Mr. SPEAKER.—The Hon'ble Member may study the language and then try to understand. I cannot say that he should not talk in that language.

*Sri B. R. SUNTHANKAR (Belgaum City).—Mr. Speaker, I would like to make a few observations on this Appropriation Bill, but I would restrict my observations to two or three points.

In the first place, my Hon'ble Friend, Sri Venkatai Gowda, has rightly pointed out the flaw in this Bill. In Clause 2 the specific period for which this vote on account is asked for is not given. It is only said 'for the service of a part of the financial year 1962-63'. Part of the year may mean any time, any month, even four or less or even more. So, the specific period or the specific month should have been mentioned in this clause.

Sri S. R. KANTHI.—Sir, I would like to make the position a little clear. An Appropriation Bill is only a Bill which enables the Government to spend. Already, the vote on account has been voted by this House and it is only in terms of that vote on account that this Bill has been brought. So, there is no need to mention the period specifically.

Sri B. R. SUNTHANKAR.—Even though it is implied, it would have been specifically mentioned therein.

After closely studying the budget speech of the Hon'ble the Chief Minister one is alarmed at the deteriorating financial condition of the State, because on the one side the burden of taxation on the common man is increasing year by year and on the other side the debts of the State are also increasing year by year. The burden of taxation, as rightly pointed out yesterday by the Hon'ble Member Sri Venkatai Gowda, has increased during the last five years ; it has nearly doubled. As regards the State taxes, direct as well as indirect, from 1957-58 upto the present year *i.e.* 1962-63, the taxation burden has increased from Rs. 17 crores to nearly Rs. 30 crores.

It has become double. Besides, Sir, during the Third Five Year Plan, as the Budget speech says, there will be more burden of taxation to the tune of Rs. 42 crores. At present, the State taxation *per capita* is Rs. 50.

2-00 P.M.

*Sri S. R. KANTHI.—I beg to submit that these points have already been referred to when the 'Vote on Account' was discussed. It would be rather convenient if these remarks are offerred at the time of discussion on the Budget and not confine ourselves to the Bill itself. In fact, there is no scope for discussion at all.

Sri B. R. SUNTHANKAR.—I am not repeating. I am going to different points. At the end of five years, the taxation *per capita* would be to the tune of thirty-five rupes. So, that is going to be a very heavy burden on the common man looking to the conditions of the people of the State. Sir, the basic question is whether we are getting appropriate return for the taxation, whether the common man in the State is getting a proper return for the heavy taxation. What is the return that the people are getting so far ? The taxes are raised three-fold ; but taking into consideration the three fold increase in taxation, what is the return that the people, the common man in the State will get? Looking to the conditions of the people, it is very difficult to say that the common man is obtaining commensurate or proportionate return for the taxation. Looking to the grievances that the people have and the difficulties

(SRI B. R. SUNTHANKAR)

